

‘ನಟ ಸಾರ್ವಭೌಮ’ ಚಿತ್ರದಲ್ಲಿ ಪುನೀತ್

## ವರ್ಷಾಂತ್ಯಕ್ಕೆ ತಾರಾಮೆರವಣಿಗೆ!

ವರ್ಷವಿಡೀ ಆವರಿಸಿದ್ದ ಬರಗಾಲ ಮುಗಿದು ಡಿಸೆಂಬರ್ ಆರಂಭದಿಂದಲೇ ಮಳೆಯಾಗುವ ಮುನ್ಸೂಚನೆ ಇದೆ. ರಾಮ್‌ಗೋಪಾಲ್ ವರ್ಮ ಅವರ ಶಿಷ್ಯ ನಿರ್ದೇಶಿಸಿರುವ ಧನಂಜಯ್ ನಾಯಕನಾಗಿ ನಟಿಸಿರುವ ‘ಭೈರವಗೀತ’ ಸಿನಿಮಾ ಇದೇ ತಿಂಗಳ 22ರಂದು ಬಿಡುಗಡೆಯಾಗುತ್ತಿದೆ. ಯಶ್ ನಟಿಸಿರುವ ಬಹುನಿರೀಕ್ಷಿತ ‘ಕೆಜಿಎಫ್’ ಕೂಡ ನವೆಂಬರ್‌ನಲ್ಲಿಯೇ ಬಿಡುಗಡೆಯಾಗಬೇಕಿತ್ತು. ಆದರೆ ಹಿಂದಿಯ ವಿತರಕರು ಪ್ರಚಾರಕ್ಕೆ ಇನ್ನಷ್ಟು ಸಮಯ ಕೇಳಿದ್ದರಿಂದ ಡಿಸೆಂಬರ್ 21ಕ್ಕೆ ಮುಂದೂಡಲಾಗಿದೆ. ಈ ಚಿತ್ರ ಕನ್ನಡದ ಜತೆಗೆ ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿಯೂ ಬಿಡುಗಡೆಯಾಗುತ್ತಿದೆ. ಹಾಗೆಯೇ ಯೋಗರಾಜ್ ಭಟ್ಟರ ‘ಪಂಚತಂತ್ರ’ ಸಿನಿಮಾ ಕೂಡ ಡಿಸೆಂಬರ್ ಅಂತ್ಯದಲ್ಲಿ ಬಿಡುಗಡೆ ಮಾಡುವ ಸಿದ್ಧತೆ ನಡೆದಿದೆ. ಬಹುತಾರಾಗಣದ ‘ಮುನಿರತ್ನ ಕುರುಕ್ಷೇತ್ರ’, ಪುನೀತ್‌ರ ‘ನಟಸಾರ್ವಭೌಮ’, ಸುದೀಪ್ ಅವರ ‘ಕೋಟಿಗೊಬ್ಬ 3’, ರಕ್ಷಿತ್ ಶೆಟ್ಟಿ ನಟಿಸಿರುವ ‘ಅವನೇ ಶ್ರೀಮನ್ನಾರಾಯಣ’, ಗಣೇಶ್ ಅವರ ‘ಆರೆಂಜ್’ ಹೀಗೆ ಸ್ಟಾರ್ ನಟರ ಹೊಸ ಚಿತ್ರಗಳು ಒಂದರ ಹಿಂದೆ ಒಂದರಂತೆ ಬಿಡುಗಡೆಗೆ ಸಿದ್ಧವಾಗುತ್ತಿವೆ. ಹಾಗಾಗಿ ಈ ವರ್ಷಾಂತ್ಯಕ್ಕೆ ಚಂದನವನದಲ್ಲಿ ಚಿತ್ರಸುಗ್ಗಿ ಆರಂಭವಾಗುವ ಎಲ್ಲ ಲಕ್ಷಣಗಳೂ ಇವೆ. ಮುಂದಿನ ವರ್ಷಾರಂಭಕ್ಕೂ ಈ ತಾರಾಮೆರವಣಿಗೆ ವ್ಯಾಪಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಭಾಷೆಗಳತ್ತ ಕಣ್ಣುಹಾಯಿಸಬೇಕು. ಈಗ ಕೆಲವೇ ವರ್ಷಗಳ ಹಿಂದೆ ಮರಾಠಿಯಲ್ಲಿ ಬರೀ ಹಾಸ್ಯಪ್ರಧಾನ, ಅಷ್ಟೇನೂ ಒಳ್ಳೆಯ ಅಭಿರುಚಿ ಇಲ್ಲದ ಸಿನಿಮಾಗಳೇ ತುಂಬಿ ತುಳುಕುತ್ತಿದ್ದವು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಈಗಲೂ ಅಲ್ಲಿ ಹಾಸ್ಯಪ್ರಧಾನ ಸಿನಿಮಾಗಳು ಬರುತ್ತಿವೆ. ಆದರೆ ಅದಕ್ಕೆ ಸರಿಸಮವಾಗಿ ಗಂಭೀರ ವಸ್ತುವುಳ್ಳ, ಭಿನ್ನ ಧಾಟಿಯ ಸಿನಿಮಾಗಳು ರೂಪುಗೊಳ್ಳುತ್ತಿವೆ, ಮತ್ತವನ್ನು ಜನರು ನೋಡುತ್ತಿದ್ದಾರೆ.

ಮಲಯಾಳಂನಲ್ಲಿ ದುಲ್ಖರ್ ಸಲ್ಮಾನ್ ಬಹುದೊಡ್ಡ ಸ್ಟಾರ್ ನಟ. ಇತ್ತೀಚೆಗೆ ಬಾಲಿವುಡ್ ಅಂಗಳದಲ್ಲಿಯೂ ತಮ್ಮ ಪ್ರಭೆಯನ್ನು ಬೀರಿ ಬಂದಿರುವ ಅವರ ಚಿತ್ರಪರಿವಿಡಿಯನ್ನು ಗಮನಿಸಿದರೆ ವೈವಿಧ್ಯ ಪ್ರಯೋಗಗಳು ಎದ್ದು ಕಾಣುತ್ತವೆ. ಅವುಗಳಲ್ಲಿ ಬಹುತೇಕ ಸೂಪರ್‌ಹಿಟ್ ಸಿನಿಮಾಗಳೂ ಹೌದು. ತಮಿಳಿನ ಧನುಷ್ ನಟಿಸಿರುವ ‘ವಡಾ ಚೆನ್ನೈ’ ಈಗಲೂ ಕರ್ನಾಟಕದಲ್ಲಿಯೂ ಯಶಸ್ವಿ ಪ್ರಯೋಗ ಕಾಣುತ್ತಿದೆ. ‘ಅರ್ಜುನ್ ರೆಡ್ಡಿ’ಯಂಥ ಸೂಪರ್ ಹಿಟ್ ಸಿನಿಮಾ ಕೊಟ್ಟ ವಿಜಯ ದೇವರಕೊಂಡ ನಂತರ ನಟಿಸಿದ್ದು ‘ಗೀತಗೋವಿಂದಂ’ ಎಂಬ ತೆಲು ಹಾಸ್ಯದ ಸಿನಿಮಾದಲ್ಲಿ. ‘ನೋಟಾ’ದಂಥ ಪ್ರಯೋಗಾತ್ಮಕ ಚಿತ್ರದಲ್ಲಿ ನಟಿಸಲೂ ಅವರು ಹಿಂಜರಿಯುವುದಿಲ್ಲ. ‘ವಡಾ ಚೆನ್ನೈ’ದಂಥ ಸಿನಿಮಾಕ್ಕೆ ಇಲ್ಲಿ ಇರುವ ಪ್ರೇಕ್ಷಕಗಣವನ್ನು ಗಮನಿಸಿದರೆ; ಈಗಲೂ ಚಿತ್ರಮಂದಿರದಲ್ಲಿರುವ ‘ದಿ ವಿಲನ್’ ಚಿತ್ರದ ಗುಣಮಟ್ಟ ಮತ್ತು ಅದಕ್ಕೆ ವ್ಯಕ್ತವಾಗಿರುವ ಟೀಕೆ ಗಮನಿಸಿದರೆ ‘ಜನರಿಗೆ ಬೇಕಾಗುವಂಥ ಸಿನಿಮಾ ಮಾಡ್ತೀವಿ’ ಎಂಬ ಸಮರ್ಥನೆಯ ಗುರಾಣಿ ಎಷ್ಟು ಪೊಳ್ಳು ಎನ್ನುವುದು ತಿಳಿಯುತ್ತದೆ. ‘ಮಗಧೀರ’ ಚಿತ್ರ ಮಾಡಿದ ತೆಲುಗಿನ ರಾಮ್‌ಚರಣ್ ತೇಜ ‘ರಂಗಸ್ಥಳಂ’ ಚಿತ್ರದಲ್ಲಿ ಕಿವುಡ


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460